

## ಸಮುದ್ರಕ್ಕೆ ಬಲೆ ಹಾಕಿದವರು

ರೊಟ್ಟಿಯಾಸೆಗೋ?
ರೊಕ್ಕದಾಸೆಗೋ?
ಬಲೆಯ ಹೆಣೆದಿಹರು
ಬಲೆಯ ಹಾಕಿರುವರು

ಮೂಡಣದಿ ರವಿಯು ಮೂಡುವ ವೇಳೆಗೆ
ತಮ್ಮ ಕಾಯಕವ ಶುರು ಮಾಡುವರು
ಹೊರೆಯಷ್ಟು ಮೀನು ಸಿಕ್ಕಾವೆಂದು!
ಹಿಡಿಯಷ್ಟು ಹವಳ ದಕ್ಕಬಹುದೆಂದು
ಇದು ಒಂದು ಮುತ್ತಿನ ಕಥೆ!

ಸಮುದ್ರಕ್ಕೆ ಬಲೆ ಹಾಕಿದ್ದಾರೆ
ಮಳೆ ಬರುತ್ತಿದ್ದರೂ
ಮೀನಿಗಾಗಿಯೋ?
ಮೀನಿನಂತಹ ಮುತ್ತು, ಹವಳ, ಪಚ್ಚೆಗಾಗಿಯೋ!
ಸಮುದ್ರ ಮಾತ್ರ ಮಾತೃಮೌನದ ತರ
ಮಕ್ಕಳು ತಿಂದುಂಡು ಬಾಳಲೆಂದು
ಹರಸುವುದಷ್ಟೇ ಅದರ ಪ್ರೀತಿ

ಬಲೆಯ ಹಾಕಿದ
ಮೀನುಗಾರರಿಗೂ ಗೊತ್ತು
ಸಮುದ್ರ ತಮ್ಮ ಸಲಹುವ ತಾಯಿಯೆಂದು
ಸಹನಾ ಮೂರ್ತಿಯೆಂದು

**ಸುರೇಶ ತಂಗೋಡ**

## ಬಲೆಯ ಬೆಲೆ

ಜತೆಗೂಡಿ ನಾವು ಎಳೆಯೋಣ ಬಲೆಯ
ಮಳೆ ಬಿಸಿಲಿನಲ್ಲೂ ದುಡಿದು ಬದುಕೋಣ
ಮೀನುಗಳ ಹಿಡಿದು ಮಾರೋಣ ಎಲ್ಲರಿಗು
ಜೇಬುಗಳ ತುಂಬುತ್ತ ಮನೆಗೆ ಮರಳೋಣ

ಬದುಕಿನಲಿ ಒಗ್ಗೂಡಿ ಕಷ್ಟಗಳ ಸಹಿಸೋಣ
ಮನೆ, ಮಡದಿ ಮಕ್ಕಳನು ಪ್ರೇಮದಲಿ
ನೋಡೋಣ
ದುಡಿಮೆಯಾ ಬೆಲೆಯನ್ನು ಅರಿತು ಬದುಕೋಣ

ಪುಟ್ಟ ದೋಣಿಯೇ ಇರಲಿ, ಹಾಯಿ
ದೋಣಿಯೇ ಇರಲಿ
ಹಿಗ್ಗದೆಯೆ, ಕುಗ್ಗದೆಯೆ ಸಾಗರಕೆ ಧುಮುಕೋಣ
ಬಲೆಯ ಬೀಸುತ್ತ ನಾವು ಮುಂದೆ ಸಾಗೋಣ

ಮಳೆಯು ಸುರಿಯುತಿರಲಿ, ಬಿಸಿಲು ಬೆನ್ನನ್ನು
ಸುಡಲಿ
ನಮ್ಮ ಕಾಯಕಕೆ ಸೋಲು ಬಾರದೇ ಇರಲಿ
ಸುನಾಮಿಯೇ ಬರಲಿ ಬಿರುಗಾಳಿಯೇ ಬೀಸಲಿ
ಸಗರ ರಾಜನ ನಾವು ನಂಬಿ ನಡೆಯೋಣ

ರತ್ನ ಗರ್ಭನು ಸಗರ ನಮ್ಮ ಪಾಲಿನ ದೈವ
ಎಂದಿಗೂ ಕೈ ಬಿಡನು ನಂಬಿದವರನ್ನ

**ಮಮತ ಕೆ. ಮೂರ್ತಿ, ಉಜಿರೆ**